ದಾರಿ ತೋರುಸಪಾ ಎಂದು ಬೇಡಿಕೊಂಡು ಮುಂದೆ ಎಡಕ್ಕೆ ತಿರುಗಿ ಐದನೆ ಮನೆಯ ಕಡೆ ಕಣ್ಣಾಯಿಸಿದ. ಕೆಂಪುಹಂಚಿನ ಮನೆಗೆ ಹೊರಗೆರಡು ಕಂಬಗಳು. ನಾಲ್ಕೈದು ಮಂದಿ ಕೂರುವಷ್ಟು ವಿಶಾಲವಾದ ಕಟ್ಟೆಗೆ ಚಾಪೆ ಹಾಸಿಕೊಂಡು ಯಾರೋ ಮಲಗಿದಂತಿತ್ತು. ಮನೆಯ ಬಳಿಗೆ ಹೋಗಿ, 'ರಾಮಣ್ಣಾರಾ..' ಎಂದು ನಿಂಗಪ್ಪ ಕೂಗಿದ. ಅಂಜನದ ರಾಮಣ್ಣನ ತಂದೆ ಮಧ್ಯಾಹ್ನದ ಊಟದ ನಂತರ ಗಡದ್ದನ ಎರಡು ಜಂಪ್ ನಿದ್ದೆ ಮಾಡಿ ನಿದ್ದೆಯಾರಿಸಿಕೊಂಡು, ಸೊಂಟದ ನೋವು ತಾಳಲಾರದೆ ಹಾಗೇ ಮಲಗಿಕೊಂಡಿದ್ದವರೆ ಎದ್ದು, 'ಯಾರು?' ಎಂದರು. ಮಲಗಿ ಎದ್ದ ಧಡೂತಿ ದೇಹವನ್ನು ಕಂಡ ನಿಂಗಪ್ಪ ಇವನೇ ಅಂಜನದ ರಾಮಪ್ಪ ಇರಬಹುದೇ ಎಂದು ಊಹಿಸಿ 'ಅಂಜನದ ರಾಮಪ್ಪ...' ಎಂದ. 'ಹೂ ಬರ್ರಿ, ಕುತರ್ರಿ' ಎಂದು ಜಗಲಿಕಟ್ಟೆಯ ಕಡೆಗೆ ಕೈಮಾಡುತ್ತಾ. 'ಏ ರಾಮ್ಯಾ.. ರಾಮ್ಯಾ..' ಎಂದು ಕೂಗಿದ. ನಿಂಗಪ್ಪನ ಊಹೆ ತಪ್ಪಾಗಿತ್ತು. ಮನೆಯೊಳಗಿನಿಂದ 'ಶಾಂಡೋ ಬನಿಯನ್, ಪಟ್ಟಾಪಟ್ಟಿ ಚಡ್ಡಿ ಹಾಕಿದ್ದ, ಹೆಗಲ ಮೇಲೊಂದು ಕೆಂಪು ವಸ್ತ್ರ ಹಾಕಿಕೊಂಡ ಆಕೃತಿಯೊಂದು ಹೊರಬಂತು.

'ಯಾರಾ ಬಂದಾರ್ ನೋಡ್ ನಿನ್ನ ಕೇಳಕೆಂಡ್' ಎಂದು ತನ್ನ ಮಗ ಅಂಜನದ ರಾಮಪ್ಪನಿಗೆ ಹೇಳುತ್ತಾ 'ಯಾವೂರ ತಮ್ಮಾ ನಿಮ್ದು' ಎಂದು ಧಡೂತಿ ದೇಹದ ಹಿರಿಯರು ನಿಂಗಪ್ಪನನ್ನು ಕೇಳಿದರು. 'ಇಲ್ಲೇ ರಟ್ಟಹಳ್ಳಿ ನಾವ್' ಎಂದು ನಿಂಗಪ್ಪ ಉತ್ತರಿಸಿದ. ಇದೆಲ್ಲ ತನಗೆ ಮಾಮೂಲಿ ಎಂಬಂತೆ, 'ಎಷ್ಟ್ ದನಾ ಹೋಗ್ಯಾವು? ಯಾವಾಗ?' ಎಂದು ಮುದಿಜೀವ ಕೇಳಿತು. ನಿಂಗಪ್ಪ ಆಶ್ಚರ್ಯದಿಂದ 'ಇವತ್ ಮುಂಜಾಲಿಂದ ಕಾಣವಲ್ದು' ಎಂದ. ಅಷ್ಟೊತ್ತಿಗೆ ಅಂಜನದ ರಾಮಪ್ಪ 'ಬರ್ರಿ ಬರ್ರಿ ಒಳಾಕ ಬರ್ರಿ' ಎಂದು ನಿಂಗಪ್ಪನನ್ನ ಮನೆಯೊಳಕ್ಕೆ ಕರೆದೊಯ್ದು ಚಾಪೆ ಹಾಸಿ, ಕೂರಿಸಿ ತಾನೂ ಕೂತು ಕೊಂಡು, ಸಣವ್ವಾ ಎಲಿ ಕೊಡು ಎಂದು ಕೂಗಿದ. ಆ ಕಡೆಗಿದ ಪುಟ್ಟ ಹುಡುಗಿಯೊಂದು ಎಲೆ ಹಿಡಿದು ತಂದುಕೊಟ್ಟು ಅಲ್ಲೇ ಪಕ್ಕದಲ್ಲೇ ಕೂತಳು. ರಾಮಪ್ಪ ತನ್ನ ಪಟ್ಟಾಪಟ್ಟಿ ಚಡ್ಡಿಯ ಒಳಜೇಬಿನಿಂದ ಸಣ್ಣ ಅಂಜನದ ಡಬ್ಬಿಯೊಂದನ್ನು ಒಳಕ್ಕೆ ಕೈಹಾಕಿ ತೆಗೆದು ಚಾಪೆ ಮೇಲಿಟ್ಟ. ಪುಟ್ಟ ಹುಡುಗಿ ಆ ಡಬ್ಬಿಯಿಂದ ಏನೋ ಜಾದೂ ಕಾಣುವಂತೆ ಕಣ್ಣರಳಿಸಿದಳು. ರಾಮಪ್ಪ ಅಂಜನದ ಡಬ್ಬಿಯ ಮುಚ್ಚಳ ತೆಗೆಯುತ್ತಾ 'ಏನ್ ಹೆಸರ ನಿಮ್ದು?' ಕೇಳಿದ.

'ನಿಂಗಪ್ಪಾ ಅಂತಾರಿ' ರಾಮಪ್ಪನ ಮುಖ ನೋಡಿದ.

'ಹೊಲಾ ಮಾಡ್ತೀರೇನು? ಎಷ್ಟ್ ಎಕರೆ ಐತಿ?'

'ನಮ್ದಲ್ರೀ ಬ್ಯಾರರ್ದು ಮಾಡತವಿ'

'ಯಾವಾಗಿಂದ ಕಾಣವಲ್ಲವು ದನಾ' ಅಂತಾ ಕೇಳುತ್ತಾ, ವೀಳ್ಯದೆಲೆಗೆ ಅಂಜನದ ಡಬ್ಬಿಯಿಂದ ಸ್ವಲ್ಪ ಚಿಟಿಕೆ ಕಪ್ಪು ವಿಕ್ಸ್‌ನಂತಿದ್ದ ಡಾಂಬರನ್ನು ಎಲೆಗೆ ಒರೆಸುತ್ತಾ ನಿಂಗಪ್ಪನ ಮುಖ ನೋಡಿದ. ನಿಂಗಪ್ಪ ಎಲೆಯನ್ನು ದಿಟ್ಟಿಸುತ್ತಿದ್ದವನು ರಾಮಪ್ಪನ ಮುಖದೆಡೆಗೆ ನೋಡಿ, 'ಬೆಳಗ್ಗಿಂದಾ ಕಾಣವಲ್ದು' ಎಂದು ಹೇಳಿದ.

'ಹೌದಾ, ಹಂಗಾರ ಯಾರರ ಮ್ಯಾಲ ಸಂಶ್ಯಾ ಐತನೂ' ಕೇಳಿದ.

'ಇಲ್ಲರಿ ನನಗ ಯಾರ್ ಮ್ಯಾಲೂ ಸಂಶ್ಯಾ ಇಲ್ಲ' ಎಂದ.

ನಿಂಗಪ್ಪನ ಮಾತು ರಾಮಪ್ಪನನ್ನು ಇಕ್ಕಟ್ಟಿಗೆ ಸಿಲುಕಿಸಿತು. ಪುಟ್ಟ ಹುಡುಗಿ ಸಣವ್ವಾ ಒಮ್ಮೆ ನಿಂಗಪ್ಪನ ಮಾತನ್ನು, ಇನ್ನೊಮ್ಮೆ ರಾಮಪ್ಪನ ಮಾತಿನ ಕಡೆಗೆ ಗಮನ ಕೊಡುತ್ತಾ ತಲೆ ಹೊರಳಾಡಿಸುತ್ತಿದ್ದಳು. ರಾಮಪ್ಪ ಎಲೆಗೆ ಅಂಜನ ಒರೆಸುತ್ತಾ ಕಣ್ಣು ಮುಚ್ಚಿಕೊಂಡು ಗುಸುಗುಸು ಅಂತಾ ಏನೇನೋ ಗೊಣಗಿದ. ಎಲೆಯ ಮೇಲೆ ಸರಿಯಾಗಿ ಚಕ್ರ ಬರೆಯುತ್ತಾ, ತೋರುಬೆರಳಿಗೆ ಹತ್ತಿದ್ದ ಅಂಜನವನ್ನು ಎಡಗೈಯ ಅಂಗೈಗೆ ಒರೆಸಿಕೊಂಡ ರಾಮಪ್ಪನ ಈ ವರ್ತನೆಯನ್ನು ಕಂಡ ನಿಂಗಪ್ಪ ಇವನ್ಯಾರೋ ದೊಡ್ಡ ಮಂತ್ರವಾದಿ ಇರಬಕು ಎಂದು ಭಾವಿಸುತ್ತಾ, ಎದುರುಗಡೆ ಕೋಣೆಯ ಗೋಡೆಗೆ ಕಣ್ಣು ಹಾಯಿತು. ರಾಶಿರಾಶಿ ದೇವರ ಫೋಟೋಗಳು ಗೋಡೆಗೆ ಅಂಟಿಕೊಂಡಿದ್ದವು. ಇನ್ನೊಂದು ಕಡೆಗೆ ಭತ್ತವೋ, ಜೋಳವೋ ತುಂಬಿದ್ದ ರಾಶಿ ಚೀಲಗಳು ಮನೆಯೊಳಗಿನ ಕೋಣೆಯಲ್ಲಿ ಒತ್ತಟ್ಟಿಗೆ ಕಂಡವು. ರಾಮಪ್ಪ ಎಲೆಯನ್ನು ಎಡ ಅಂಗೈಯಲ್ಲಿ ಇಟ್ಟುಕೊಂಡು ಎಲೆಯನ್ನೇ ದಿಟ್ಟಿಸಲು ಶುರು ಮಾಡಿದ. ಅವನ ಕಣ್ಣಿನ ನೋಟದೊಂದಿಗೆ ನಿಂಗಪ್ಪ